ವುದು ಮುಂತಾದ ಕೆಲಸಗಳಿಗೆ ಈ ಕಛೇರಿ ಬೀಳಗಿಯಲ್ಲೇ ಮುಂದುವರಿಯುವುದು ಅತ್ಯಂತ ಸಮಂಜಸವಾದದ್ದು. ಅದು ಅಲ್ಲಿದ್ದರೆ ಮಾತ್ರ ತೀವ್ರಗತಿಯಲ್ಲಿ ಪರಿಹಾರ ಒದಗಿಸುವುದು ಸಾಧ್ಯ. ಇದ್ದ ಸೌಲಭ್ಯ ಕಸಿದುಕೊಂಡು ಮಂತ್ರೊಂದು ಕಡೆ ದೂರದ ಸ್ಥಳದಿಂದ ಅದನ್ನು ಒದಗಿಸಿಕೊಡುತ್ತೇವೆನ್ನುವುದು ಕಾರ್ಯದಕ್ಷ ಆಡಳಿತದ ಲಕ್ಷಣವಲ್ಲ. ದಕ್ಷತೆಯ ದೃಷ್ಟಿಯಿಂದ ಜನತೆಯ ಸಂಕಷ್ಟಗಳ ತೀವ್ರ ಪರಿಹಾರದ ದೃಷ್ಟಿಯಿಂದ ಹಾಗೂ ಗಂಡಾಂತರ ಸಮಯದಲ್ಲಿ ಸರ್ಕಾರ ನಮ್ಮ ಹತ್ತಿರವೇ ಇದೆಯೆಂಬ ಭರವಸೆಯ ದೃಷ್ಟಿಯಿಂದ ಈ ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಛೇರಿಯನ್ನು ಬೀಳಗಿಯಲ್ಲೇ ಮುಂದುವರಿಸಬೇಕು. ಅದು ಮತ್ತೊಂದು ಚಳುವಳಿಗೆ ಅಶಾಂತಿಗೆ ಕಾರಣವಾಗಬಾರದೆಂದು ತಮ್ಮ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಬೀಳಗಿಯಲ್ಲಿ ಭೂ-ಸ್ವಾಧೀನ ಮಾಡತಕ್ಕ ಕೆಲಸ ಮುಕ್ತಾಯ ಹಂತದಲ್ಲಿದೆ. ಅಲ್ಲಿ ೩ ಪ್ರಕರಣಗಳು ಮಾತ್ರ ಬಾಕಿ ಉಳಿದಿವೆ. ಸಿಬ್ಬಂದಿ ಅಲ್ಲಿರುವುದರಿಂದ ಲಕ್ಷಾಂತರ ರೂಪಾಯಿಗಳ ಖರ್ಚು ಸರ್ಕಾರಕ್ಕೆ ಬರುತ್ತದೆ ಕೆಲಸ ಇಲ್ಲದೆ ಅಷ್ಟೊಂದು ಹಣವನ್ನು ಖರ್ಚು ಮಾಡುವುದು ಸೂಕ್ತವಲ್ಲ. ಆ ದೃಷ್ಟಿಯಿಂದ ಆ ಕಛೇರಿಯನ್ನು ಜಮಖಂಡಿಗೆ ಬದಲಾವಣೆ ಮಾಡತಕ್ಕಂತಹ ಅಲೋಚನೆಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಅಲ್ಲಿಯ ಜನರಿಗೆ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಆ ಜನರಿಗೆ ಅನುಕೂಲವಾಗತಕ್ಕ ರೀತಿಯಲ್ಲಿ ಏನು ಸಹಾಯ ಬೇಕೋ ಅದನ್ನು ಮಾಡುತ್ತೇವೆ.

೮) ಕೃಷ್ಣ ಎಲ್ಡಂಡೆಯ ಯೋಜನೆಯಿಂದ ಮುಳುಗಡೆಯಾಗಲಿರುವ ಕೊಲ್ಲಾರ ಗ್ರಾಮದವರಿಗೆ ಪರಿಹಾರ ಧನವನ್ನು ಮಂಜೂರು ಮಾಡುವುದರ ಬಗ್ಗೆ

ಶ್ರೀ ಕುಮಾರಗೌಡ ಎ. ಪಾಟೀಲ್ —— ಮಾನ್ಯ ಅಧ್ಯಕ್ಷರೇ, ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಬರುವ ಗ್ರಾಮವಾದ ಕೊಲ್ಲಾರ ಗ್ರಾಮ. ಇದು ಕೃಷ್ಣಾ ಮೇಲ್ದಂಡೆಯ ಯೋಜನೆಯಲ್ಲಿ ಮುಳುಗಡೆಯಾಗುತ್ತಿದ್ದು ಅದರಲ್ಲೂ ಬಸವನಬಾಗೆವಾಡಿ ತಾಲ್ಲೂಕಿನಲ್ಲಿ ಮುಳುಗಡೆಯಾಗುವಂತಹ ಹಳ್ಳಿಗಳಲ್ಲಿ ದೊಡ್ಡಗ್ರಾಮವಿದ್ದು. ಈಗ ಅಲ್ಲಿಯ ಜನ ಮಾನ್ಯ ಮುಖ್ಯ ಮಂತ್ರಿಗಳಿಗೆ, ಲೋಕೋಪಯೋಗಿ ಖಾತೆ ಮಂತ್ರಿಗಳಿಗೆ ಮತ್ತು ಕಂದಾಯ ಮಂತ್ರಿಗಳಿಗೆ ಬೇಗನೆ ಮುಳುಗಡೆ ಆಗುವ ಮನೆಗಳಿಗೆ ಪರಿಹಾರಧನ ಮಂಜೂರು ಮಾಡಲು ವಿನಂತಿಸಿಕೊಂಡಿದ್ದಾರೆ. ಇಲ್ಲಿಯವರೆಗೆ ಯಾವುದೇ ವ್ಯವಸ್ಥೆ ಆಗಿಲ್ಲ. ಆದ್ದರಿಂದ ಅಲ್ಲಿಯ ಜನರು ೪-೫ ವರ್ಷ ಬರಗಾಲದಿಂದ ಬಳಲುತ್ತಿದ್ದು ಅವರ ಮನೆಗಳ ಮೇಲೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡಿದ್ದು ಅದರಬಡ್ಡಿ ೨ ಪಟ್ಟು ೩ ಪಟ್ಟು ಹೆಚ್ಚಾಗಿದೆ. ಆದರ ಸಲುವಾಗಿ ೯-೯-೧೯೮೭ನೇ ದಿವಸ ಕೊಲ್ಲಾರ ಗ್ರಾಮದಿಂದ ೧೫೦ ಜನ ಬಂದಿದ್ದಾರೆ. ಅದರ ಬಗ್ಗೆ ಬೇಗನೆ ಹಣ ಮಂಜೂರು ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ. ಈ ವಿಷಯವನ್ನು ಮಾನವೀಯತೆ ದೃಷ್ಟಿಯಿಂದ ನೋಡಿ ಬೇಗನೆ ಹಣ ಮಂಜೂರು ಮಾಡಬೇಕಾಗಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕೊಲ್ಲಾರ ಗ್ರಾಮದ ಜನರು ಮತ್ತು ಆ ಕ್ಷೇತ್ರವನ್ನು ಪ್ರತಿನಿಧಿಸುವಂತಹ ಶಾಸಕರಾದ ಶ್ರೀಮಾನ್ ಕುಮಾರಗೌಡ ಎ. ಪಾಟೀಲ್‌ರವರು ನಿನ್ನೆ ನನ್ನನ್ನು ಭೇಟಿಯಾಗಿದ್ದಾರೆ. ಅವರ ಬೇಡಿಕೆಯ ಬಗ್ಗೆ ಸಹಾನುಭೂತಿ ಇದೆ. ಆದಷ್ಟು ಬೇಗ ಸಹಾಯ ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

೯) ಕರಾವಳಿಯ ಮೀನುಗಾರರ ಸಂಕಷ್ಟವನ್ನು ನೀಗಿಸಲು ಕನಿಷ್ಟ ಅವಶ್ಯಕತೆಗಳನ್ನು ಪೂರೈಸುವುದರ ಬಗ್ಗೆ

ಶ್ರೀ ಪ್ರತಾಪ ಚಂದ್ರ ಶೆಟ್ಟಿ.— ಅಧ್ಯಕ್ಷರೇ, ಕರ್ನಾಟಕದ ಕರಾವಳಿಯ ಮೀನುಗಾರರ ಸಂಕಷ್ಟದ ಕುರಿತು ಬೇಡಿಕೆಗಳು ಸರ್ಕಾರದ ಮುಂದೆ ಕಳೆದ ಕೆಲವು ವರ್ಷಗಳಿಂದ ಸಲ್ಲುತ್ತಲೇ ಇವೆ, ಮಾನ್ಯ ಮಂತ್ರಿಗಳಿಂದ ಆಶ್ವಾಸನೆಗಳು ಬರುತ್ತಲೇ ಇವೆ. ಬಡ ಮೀನುಗಾರರ ಪರಿಸ್ಥಿತಿ ಮಾತ್ರ ಅಧೋಗತಿಗೆ ಹೋಗುತ್ತಲೇ ಇದೆ. ಬಡ ಮೀನುಗಾರರಿಗೆ ಮನೆ ನಿವೇಶನ ಇಲ್ಲ, ಸ್ವಂತ ಮನೆಯಂತೂ ಇಲ್ಲವೇ ಇಲ್ಲ.